



# ಮೋಹನದಾಸ
## ಸಿನಿಮಾ ನಾನೇಕೆ ಮಾಡಿದೆ?



**ಕನ್ನಡದಲ್ಲಿ ಮೊದಲ ಬಾರಿಗೆ ಮಹಾತ್ಮ ಗಾಂಧಿಯ ಜೀವನಚಿತ್ರವನ್ನು ಸಿನಿಮಾ ಮೂಲಕ ಕಟ್ಟಿಕೊಡುವ ಪ್ರಯತ್ನ ನಡೆದಿದೆ – 'ಮೋಹನದಾಸ' ಸಿನಿಮಾ ಮೂಲಕ. ಇದು ಪಾಪು ಗಾಂಧಿ ಬಾಪು ಆದ ಕಥೆಯ ಚಿತ್ರಣ. 'ಮೋಹನದಾಸ'ನನ್ನು ಚಿತ್ರಿಸುವ ಸಾಹಸಕ್ಕೆ ತಮ್ಮನ್ನೊಡ್ಡಿಕೊಂಡ ಪಿ. ಶೇಷಾದ್ರಿ ಅವರು, ಸಿನಿಮಾ ರೂಪಿಸುವ ಪ್ರಯಅತ್ನದಲ್ಲಿ ಗಾಂಧಿಯೊಂದಿಗಿನ ತಮ್ಮ ಅನುಸಂಧಾನವನ್ನು 'ಸುಧಾ' ಓದುಗರಿಗಾಗಿ ನೆನಪಿಸಿಕೊಂಡಿದ್ದಾರೆ. ಗಾಂಧಿ ನಮ್ಮೊಳಗೆ ಮತ್ತೆ ಮತ್ತೆ ಹೊಸಹುಟ್ಟು ಪಡೆಯುವ ಪ್ರಕ್ರಿಯೆಗೆ ಈ ಕಥನ ಉದಾಹರಣೆಯಂತಿದೆ. ಇದು ಅಕ್ಟೋಬರ್ 2ರ 'ಗಾಂಧಿ ಜಯಂತಿ' ವಿಶೇಷ.**

■ ಪಿ.ಶೇಷಾದ್ರಿ

'ನಿನ್ನ 'ಮೂಕಜ್ಜಿಯ ಕನಸುಗಳು' ಚಿತ್ರದ ವಿಶೇಷವೇನು?'

ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಆಸ್ಟ್ರೇಲಿಯಾ ದೇಶದ ಚಿತ್ರಕಥಾ ತಜ್ಞೆ ಕ್ಲೇರ್ ಡಾಬಿನ್ **(Claire Dobbin)** ನನ್ನನ್ನು ಕೇಳಿದರು. ನಾನು ಶಿವರಾಮ ಕಾರಂತರ ಬಗ್ಗೆ, ಕಾದಂಬರಿಯ ವೈಚಾರಿಕತೆಯ ಬಗ್ಗೆ, ಭಾರತೀಯ ಸಂಸ್ಕೃತಿಯ ಬಗ್ಗೆ, ಜ್ಞಾನಪೀಠ ಪ್ರಶಸ್ತಿಯ ಕುರಿತು ವಿವರವಾಗಿ ಹೇಳಿದೆ. ಆಕೆ ವಿದೇಶೀ ಶೈಲಿಯಲ್ಲಿ ಭುಜ ಕುಣಿಸುತ್ತಾ 'ಇಂಟರೆಸ್ಟಿಂಗ್' ಎಂದರು.

'ನಿನ್ನ ಮುಂದಿನ ಚಿತ್ರ ಯಾವುದು?' ಮರು ಪ್ರಶ್ನೆ ಹಾಕಿದರು.

ನಾನು, 'ಮೋಹನದಾಸ' ಎಂದೆ.

ಒಂದು ಕ್ಷಣ ಕಣ್ಣು ಪಿಳುಕಿಸಿದ ಅವರು **'Come again'** ಎಂದರು. ನಮ್ಮ ಇಂಡಿಯನ್ ಇಂಗ್ಲಿಷಿನ ಉಚ್ಚಾರಣೆ ಕೆಲವೊಮ್ಮೆ ವಿದೇಶಿಯರಿಗೆ ಅರ್ಥವಾಗುವುದಿಲ್ಲ. ಹಾಗಾಗಿ ನಾನು ನಿಧಾನವಾಗಿ **'MOHANDAS'** ಎಂದೆ. ಅವರ ಕಣ್ಣುಗಳು ಅರಳಿದವು. **'Is this film about Gandhi?'** ಎಂದರು. ನಾನು, 'ಹೌದೌದು ಇದು ಅವರ ಬಾಲ್ಯದ ಘಟನೆಗಳನ್ನು ಕುರಿತ ಬಯೋಪಿಕ್ ಚಿತ್ರ' ಎಂದೆ. 'ವ್ಹಾವ್! ಚಿತ್ರದ ಬಗ್ಗೆ ಇನ್ನಷ್ಟು ವಿವರ ಹೇಳು' ಎಂದು ಕುತೂಹಲ ಪ್ರಕಟಿಸಿದರು. ನಾನು ನನ್ನ ಚಿತ್ರದ ಬಗ್ಗೆ ವಿವರಿಸಿದೆ. 'ಒಳ್ಳೆಯ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದೀಯ. ಆಲ್ ದಿ ಬೆಸ್ಟ್! ಆದರೆ ಇಷ್ಟು ವರ್ಷ ಯಾರೂ ಗಾಂಧಿಯ ಬಾಲ್ಯ ಕುರಿತು ಯಾಕೆ ಚಿತ್ರ ಮಾಡಿಲ್ಲ?' ಎಂದು ಕೇಳಿದರು. 'ನನಗೆ ಗೊತ್ತಿಲ್ಲ, ಆದ್ರೆ ನಾನೀಗ ಮಾಡ್ತಿದ್ದೀನಲ್ಲ' ಎನ್ನುತ್ತಾ ಹುಸಿನಕ್ಕು, 'ಮಿಸೆಸ್ ಡಾಬಿನ್, ನನ್ನ ಈ ಚಿತ್ರಕಥೆಯನ್ನು ಒಮ್ಮೆ ಓದಿ ಸಲಹೆ ಕೊಡಲು ಸಾಧ್ಯವೇ?' ಎಂದು ಕೇಳಿದೆ. **'Why not? With pleasure'** ಎಂದರು.

ವಿದೇಶೀಯರ ಕೆಲಸದ ಶಿಸ್ತು ಮತ್ತು ವ್ಯಾವಹಾರಿಕ ನಿಷ್ಠುರತೆ ಬಗ್ಗೆ ಅರಿವಿದ್ದ ನಾನು ಮುಂದುವರಿದು, 'ಆದರೆ ನಾನು ನಿಮಗೆ ಡಾಲರ್‌ನಲ್ಲಿ ಫೀಸ್ ಕೊಡಲಾರೆನೇನೋ...' ಎಂದು ರಾಗವೆಳೆದೆ. ಆಕೆ ಜೋರಾಗಿ ನಕ್ಕು ಭುಜದ ಮೇಲೆ ಮೆಲ್ಲನೆ ಪೆಟ್ಟು ಕೊಡುತ್ತಾ, 'ನಾನು ನಿನ್ನ ಬಳಿ ದುಡ್ಡು ಕೇಳಿದೆನೇನು? ಇದು ಗಾಂಧಿಯಂತಹ ಮಹಾನ್ ವ್ಯಕ್ತಿಗೆ ನಾನು ಮಾಡುವ ಸರ್ವೀಸ್' ಎಂದರು. ಅಬ್ಬಾ! ನನ್ನ ದೊಡ್ಡ ಚಿಂತೆ ದೂರವಾಗಿತ್ತು.

ಈ ಘಟನೆ ಏಕೆ ಹೇಳಿದೆನೆಂದರೆ ಗಾಂಧಿ ಬಗ್ಗೆ ಹೊರಗಿನವರಿಗೆ ಇರುವ ಕುತೂಹಲದ ಬಗ್ಗೆ ತಿಳಿಸಲು. ಇನ್ನೂ ಒಂದು ವಿಚಾರವಿದೆ. ನಮ್ಮ ಭಾರತೀಯ ಚಲನಚಿತ್ರಗಳು ಸಿನಿಮಾಭಾಷೆಯನ್ನು ಸಮರ್ಥವಾಗಿ ದುಡಿಸಿಕೊಳ್ಳುವುದಿಲ್ಲ, ನರೇಟಿವ್ ಭಿನ್ನವಾಗಿರುವುದಿಲ್ಲ. ಅವು ಬರಿಯ ಕಥೆ ಹೇಳುವ